ಅಣಿಗೊಳಿಸಿದ್ದು...ಕಾಳಿ ತೀರದಿಂದ ಕೃಷ್ಣಾ ದಂಡೆಗೆ ಬರಮಾಡಿದ್ದು...

ಆಲಮಟ್ಟಿ ಡ್ಯಾಮ್ ಹತ್ತಿರವೇ ಇರಬೇಕು. ನದಿಯಲ್ಲಿ ಹಿನ್ನೀರು ವಿಸ್ತಾರವಾಗಿ ಹರವಿಕೊಂಡಿತ್ತು. ನಮ್ಮ ನದಿಗಳಲ್ಲಿ ಬರೀ ಸಿಹಿ ನೀರೇ ಇರೋದು ಅಂದಿದ್ದಳು ಸುಮಿ. ನಮ್ಮ ಕಾಳಿಯೂ ಕದ್ರಾಕ್ಕಿಂತ ಮೇಲೆ ಹೋದರೆ ಸಿಹಿಸಿಹಿನೇ...ನಿನ್ನ ಹಾಗೆ ಅಂದಿದ್ದ. ನೀನು ಕವಿಯಾಗಾಕ್ ಹತ್ತಿದಿ ಬಿಡು ಎಂದು ನಕ್ಕಿದ್ದಳು. ಕಳೆದ ವರ್ಷ ನೆರೆಯುಕ್ಕಿ ದಡಗಳಲ್ಲಿರುವ ಊರುಗಳು ಮುಳುಗಿದ ಕತೆ ಹೇಳಿದ್ದಳು. ನಮ್ಮೂರಾಗ ಮಳೆ ಬರದಿದ್ರೂ ಪ್ರವಾಹ ಬರತೈತಿ ಗೊತ್ತಾ, ಎಂದಿದ್ದಳು. ಸಿದ್ನಾಳ ಊರಿನಲ್ಲಿ ಸಂತೆ ಇತ್ತೇನೋ. ಬಸ್ಸು ಗಚ್ಚಾಗಿಚ್ಚಿಯಾಯ್ತು. ಆ ರಶ್‌ನಲ್ಲೇ ಭೀಮಾ ನದಿಯನ್ನು ದಾಟಿದ್ದಾಯಿತು. ಗಾಣಗಾಪುರ ದಾಟಿದ ಮೇಲೆ ಗಾಳಿಯಲ್ಲಿ ಸುಮಿಯ ಗಂಧವೇ ಬೆರೆತಂತೆ ಅನಿಸಿತು. ಗುಲ್ಬರ್ಗಾ ಇನ್ನು ಹೆಚ್ಚು ದೂರ ಇರಲಿಕ್ಕಿಲ್ಲ. ಅಲ್ಲಿ ಇಳಿದು ರಾತ್ರಿಯನ್ನು ಅದು ಹೇಗೋ ಕಳೆದರೆ, ಬೆಳಿಗ್ಗೆ ಶೈಲತ್ತೆಯನ್ನು ಪತ್ತೆಹಚ್ಚುವ ಕೆಲಸ ಶುರು ಮಾಡಬೇಕು. ಹೋಟೆಲ್ ರೂಮ್ ಮಾಡಿದರೆ ಪುಕ್ಸಟ್ಟೆ ಖರ್ಚು. ಆದಷ್ಟು ಕಡಿಮೆ ಹಣದಲ್ಲಿಈ ನನ್ನ ಪ್ರೇಮಯಾತ್ರೆಯನ್ನು ಸಂಭಾಳಿಸಬೇಕು. ಏನಾಗುತ್ತದೆ, ಬಸ್ ಸ್ಟ್ಯಾಂಡಿನಲ್ಲೇ ಮಲಗುತ್ತೇನೆ. ಈ ಬಯಲು ಸೀಮೆಯಲ್ಲಿ ಕಾರವಾರದ ಬಡ ಬೆಸ್ತರ ಹುಡುಗನ ಗುರುತು ಹಿಡಿಯಲು ನಾನೇನು ಫಿಲ್ಮ್ ಸ್ಟಾರ್ ಅಲ್ಲವಲ್ಲ...

'ಪ್ರೀತಮ್ಮಾ ಅಂದ್ರೆ ಯಾರಲೇ?' ಎಂಬ ಧ್ವನಿ ಬಂದತ್ತ ಪ್ರೀತಂನ ಕಿವಿಗಳು ಸಟಕ್ಕನೆ ನೆಟ್ಟಗಾದವು. ರಾತ್ರಿ ಒಂಬತ್ತು ಗಂಟೆ! ಆಗಷ್ಟೇ ಬಸ್ಸು ಕಲಬುರಗಿ ಕೇಂದ್ರ ಬಸ್ ನಿಲ್ದಾಣ ತಲುಪಿತ್ತು. ಬಸ್ ಸ್ಟ್ಯಾಂಡಿನಲ್ಲಿ ಜಸ್ಟ್ ಇಳಿದಿದ್ದ. ಗುಲ್ಬರ್ಗಾದ ಅಪರಿಚಿತ ನೆಲದ ಮೇಲೆ ಇಟ್ಟ ಮೊದಲ ಹೆಜ್ಜೆಯಲ್ಲೇ ಯಾರೋ ತನ್ನ ಹೆಸರು ಕರೆಯುವುದನ್ನು ಆತ ನಿರೀಕ್ಷಿಸಿರಲಿಲ್ಲ. ಆ ಧ್ವನಿಯ ಒರಟುತನಕ್ಕೆ ಅವನು ಅಲರ್ಟ್ ಆದ. ಮೀನು ತಿಂದ ತಲೆ ಅವನನ್ನು ಏಕಕಾಲಕ್ಕೆ ಹಲವು ಸಾಧ್ಯತೆಗಳನ್ನು ಕ್ಷಣಾರ್ಧದಲ್ಲಿ ಗುಣಿಸಿ ಭಾಗಿಸುವ ಕೆಲಸ ಮಾಡಿತು. ಸುಮಿಯ ಕಡೆಯವರಿಗೆ ತಾನು ಇಲ್ಲಿಗೆ ಬರುವ ಬಾತ್ಮಿ ಸಿಕ್ಕಿರಬೇಕು... ತನ್ನನ್ನು ಇಲ್ಲಿಂದಲೇ ಅಪರಿಚಿತ ಸ್ಥಳಕ್ಕೊಯ್ಯಲು ಜನ ಕಳಿಸಿರಬೇಕು, ಅಥವಾ ಕೈಕಾಲು ಮುರಿದು ಬನ್ನಿ ಅಂತ ಹೇಳಿರಬೇಕು... ಪ್ರೀತಂನ ಸೂಕ್ಷ್ಮ ಇಂದ್ರಿಯ ಅಪಾಯವನ್ನು ಗ್ರಹಿಸಿತ್ತು. ಸಿಕ್ಕಿಬಿದ್ದರೆ ಕತೆ ಮುಗೀತು. ಈ ಅಪರಿಚಿತ ಜಾಗದಿಂದ ಎಂದೂ ತಪ್ಪಿಸಿಕೊಳ್ಳಲಾರೆ. ಈಗ ಆಯ್ಕೆಗಳೇ ಇಲ್ಲ. ತಿರುಗದೇ ತಪ್ಪಿಸಿಕೊಳ್ಳುವುದೊಂದೇ ದಾರಿ. ಗಾಳಕ್ಕೆ ಸಿಕ್ಕಿಸಿದ ಎರೆಯ ಅಲುಗಾಟದಲ್ಲೇ ಅಪಾಯವನ್ನು ಗ್ರಹಿಸಿ ಮಾಯವಾಗುವ ಸೆಳಕದಂಥ ನಿಗೂಢ ಮೀನುಗಳನ್ನು ನೀರಿನಲ್ಲಿ ಕಂಡದ್ದಿದೆ. ಡೇಂಜರ್ ಝೋನಿನಿಂದ ಪಾರಾಗು ಮಗನೇ, ಎಂಬ ಎಚ್ಚರದ ಗಂಟೆ ಬಾರಿಸಿತು.

ಜಾವೆಲಿನ್ ಎಸೆದು ಹುರಿಗೊಂಡ ಅವನ ಕೈಕಾಲುಗಳು ಅಂಥ ವೇಗಕ್ಕೆ ಸೆಟೆದುಕೊಂಡವು. ಮಿಂಚಿನಂತೆ ಓಡಿ ಬಸ್ ಸ್ಟ್ಯಾಂಡಿನಿಂದ ಹೊರಬಿದ್ದ. ತಿರುಗದಿದ್ದರೂ ಹೆಜ್ಜೆಗಳ ದಡದಡ ಸದ್ದಿನಲ್ಲಿ ಯಾರೋ ಬೆನ್ನಟ್ಟಿ ಬರುವುದು ಅವನಿಗೆ ಅಂದಾಜಾಗುತ್ತಿತ್ತು. ಮುಖ್ಯ ರಸ್ತೆ ಬಿಟ್ಟು ಒಳ ರಸ್ತೆಗಳಲ್ಲಿ ಓಡಿದ. ಸಂಜೆವಾಣಿ ಕಾರ್ಯಾಲಯದಿಂದ ಹಾದು ಮುಂದೆ ಮದಿನಾ ಮಸ್ಜಿದ್ ಬಂತು. ಅಲ್ಲಿಯ ಕಿರು ಓಣಿಗಳನ್ನು ದಾಟಿದ. ಪ್ರಾಕ್ಟೀಸ್ ಸಮಯದಲ್ಲಿ ರೊಡ್ರಿಗ್ಸ್ ಸರ್ 'ಥಾಂಬೂ ನಕಾ... ಥಾಂವ್ ಥಾಂವ್' ಎನ್ನುವುದು ಕೇಳಿಸಿದಂತಾಗಿ ಇನ್ನಷ್ಟು ವೇಗ ಹೆಚ್ಚಿಸಿದ. ಸಾಯಿಬಾಬಾ ಮಂದಿರ ದಾಟುವಾಗ ಕ್ರಾಸ್ ರೋಡಿಂದ ಸುಂಯ್ಯನೆ ಜೀಪೊಂದು ಪಾಸಾಯಿತು. ಕ್ಷಣ ನಿಧಾನಿಸಿ ಯೋಚಿಸಿದ. ಆ ಜೀಪಿನಲ್ಲೂ ತನ್ನನ್ನು ಹುಡುಕಲು ಬಂದ ಜನ ಇರಬಹುದು ಅನಿಸಿತು. ಪಕ್ಕಕ್ಕೆ ತಿರುಗಿ ಅಡ್ಡ ಓಡಿದ. ತನ್ನ ಬೆನ್ನಿಗಿರುವ ಬ್ಯಾಗ್‌ನಿಂದ ಗುರುತು ಹಿಡಿಯಬಹುದು ಎಂದರಿತು, ಅದರಲ್ಲಿರುವ ಬಟ್ಟೆಗಳು, ಸೋಪು, ಬ್ರಶ್ಶು, ಆಯಿಲು ಎಲ್ಲವನ್ನೂ ಪಂಜಿಯಲ್ಲಿ ಸುತ್ತಿ ಬ್ಯಾಗನ್ನು ಕಸದ ತೊಟ್ಟಿಗೆಸೆದ. ಧರಿಸಿದ್ದ ನೀಲಿ ಬಣ್ಣದ ಟಿ ಶರ್ಟ್ ಮೇಲೆ ಬೇರೆ ಬಣ್ಣದ ಮತ್ತೊಂದು ಟಿ ಶರ್ಟು ಎಳೆದುಕೊಂಡ. ಬೇಟೆಗಾರನ ಚಾಲಾಕಿತನ ಮತ್ತು ಶಿಕಾರಿಯ ತೀಕ್ಷ್ಣತೆ ಅವನ ಬುದ್ಧಿಯನ್ನು ದೇಹವನ್ನು ನಿರ್ದೇಶಿಸುತ್ತಿದ್ದವು.

ಅಪರಿಚಿತ ದಾರಿಗಳಲ್ಲಿ ಓಡುತ್ತಾ ಓಡುತ್ತಾ ಪ್ರೀತಂನಿಗೆ ತಾನು ಯಾವುದೋ ಸಿನಿಮಾ ದೃಶ್ಯದೊಳಗೆ ಇರುವಂತೆ ಭಾಸವಾಯಿತು. ಕಲಬುರಗಿ ನಗರಿಯೇ ರಜತ ಪರದೆಯಾಗಿ, ತಾನೇ ಪಾತ್ರಧಾರಿಯಾಗಿ ಸೃಷ್ಟಿಯಾಗಿರುವ ಸನ್ನಿವೇಶಕ್ಕೆ ಆ ದಣಿವಲ್ಲೂ ಅವನಿಗೆ ನಗು ಬಂತು. ಅಂಥ ಒಂದು ಹಗುರ ಗಳಿಗೆಯಲ್ಲಿ ಅವನು ಓಡುವುದನ್ನು ನಿಧಾನಿಸಿ ನಡೆಯತೊಡಗಿದ. ಅವನ ದಣಿವೆಲ್ಲ ಮಾಯವಾಗುವಂತೆ ದೊಡ್ಡ ಕೆರೆಯೊಂದು ಅವನಿಗೆ ಎದುರಾಯಿತು. ಅದರ ಹೆಸರು ಕೂಡ ಅಲ್ಲಿ ಬರೆದಿತ್ತು. ಅಪ್ಪನ ಕೆರೆ! ಸುಮಿ ತನ್ನ ಮಾತುಗಳಲ್ಲಿ ಈ ಕೆರೆ ಬಗ್ಗೆ ಅನೇಕ ಸಲ ಹೇಳಿದ್ದುಂಟು! ಗಟಗಟ ನೀರು ಕುಡಿದು ಅಲ್ಲೇ ಒಂದೆಡೆ ಕೂತ. ದಣಿವಾಗಿತ್ತು, ಹಸಿವೂ! ಮಧ್ಯರಾತ್ರಿ ಸಮೀಪಿಸುವ ಸಮಯ. ಜನರ ಓಡಾಟ ಇರಲಿಲ್ಲ. ಬಿಸಿಗಾಳಿ ಇನ್ನೂ ತಣಿದಿರಲಿಲ್ಲ. ಆಕಾಶದಲ್ಲಿ ಅರ್ಧಚಂದ್ರನತ್ತ ನೋಡಿದಾಗ ಮನಸ್ಸು ಶಾಂತವಾಗತೊಡಗಿತು. ಪ್ರೀತಂನಿಗೆ ಚಂದ್ರ ಅಪರಿಚಿತನಲ್ಲ. ಮೀನಿಗೆ ಗಾಳಹಾಕಿ ಕಾದಿರುವ ಒಂಟಿ ರಾತ್ರಿಗಳಲ್ಲಿ ಚಂದ್ರನೇ ಸಂಗಾತಕ್ಕಿರುವುದು. ಆದರೆ ಚಂದಿರ ಆಪ್ತನಾದದ್ದು ಸುಮಿಯ ಸ್ನೇಹದ ನಂತರವೇ! ಸುಮಿಯ ಧ್ಯಾನದಲ್ಲಿ ಕೆಲವೊಮ್ಮೆ ಮನಸ್ಸಿನ ಮಾತುಗಳು ತುಟಿಮೀರಿ ಹೊರಬಂದಾಗ, ಚಂದಿರ ತನ್ನ ಮಾತು ಕೇಳಿ ತುಂಟತನದಿಂದ ನಗುತ್ತಿರುವಂತೆ ಅನಿಸುತ್ತಿತ್ತು. 'ಪ್ರೇಮಿಗಳ ಮಾತನ್ನು ಕದ್ದು ಕೇಳ್ತಿಯೇನೋ?' ಎಂದು ನೀರಿನಲ್ಲಿ ಬೆರಳದ್ದುತ್ತಿದ್ದ. ನದಿಚಂದ್ರ ಕಚಗುಳಿಯಾದಂತೆ ಹೊಯ್ದಾಡುತ್ತಿದ್ದ. ಆದರೆ ಅಪ್ಪನಕೆರೆಯ ನಿಶ್ಚಲ ಚಂದ್ರ ವಿರಹಮುಖಿಯಾಗಿರುವಂತೆ ಭಾಸವಾಯಿತು. ಸುಮಿಯ ಪ್ರೇಮ ಸಂಭವಿಸುವ ಮೊದಲು ಬರೀ ಚಪ್ಪಟೆಯಾಗಿ ಕಾಣುತ್ತಿದ್ದ ಚಂದ್ರನಲ್ಲಿ ಈಗ ಸಂವೇದನೆಯ ಆಯಾಮಗಳೂ ಇವೆ ಅನಿಸುತ್ತಿತ್ತು. ಇದು ಪ್ರೇಮದ ಮಹಿಮೆಯೋ ಅಥವಾ ವಿರಹದ ಮಾಯೆಯೋ ಅವನಿಗೆ ತಿಳಿಯದಾಯಿತು!

5

### ಲೈಟ್ಸ್ ಕ್ಯಾಮರಾ ಆಕ್ಷನ್

ಬಹುಶಃ ಇದು ಪ್ರೇಮದ ಲೀಲೆಯೇ ಇರಬೇಕು ಅನಿಸಿತು ಶೈಲತ್ತೆಗೆ. ಮಿಲನ ಮತ್ತು ವಿರಹ – ಎರಡೂ ಸ್ಥಿತಿಗಳಲ್ಲಿ ಅರಳಿ ನರಳಿದ ತನ್ನ ಪ್ರೇಮ, ಸುಮಿಯಲ್ಲಿ ಮತ್ತೆ ಪಲ್ಲವಿಸಿವೆ ಎಂದು ಅನಿಸುತ್ತಿತ್ತು ಅವಳಿಗೆ. ಹೀಗಾಗಿ ಸುಮಿಯ ಪ್ರೇಮದ ಮಾತುಗಳಿಗೆಲ್ಲ ಕಿವಿಯಾಗುತ್ತಿದ್ದಳು, ಹೃದಯವಾಗುತ್ತಿದ್ದಳು. ಜಾಣೆ ಸುಮಿ ಪ್ರೀತಿಸಿದ ಕಡಲ ತೀರದ ಹುಡುಗನನ್ನು ಕಾಣಬೇಕೆಂದು ಅವಳ ಮನಸ್ಸು ಬಯಸಿದ್ದು ನಿಜ. ಆದರೆ ಹೀಗೆ ದೇವಲೋಕದಿಂದ ಇಳಿದವನಂತೆ ಎದುರು ಬಂದು ನಿಲ್ಲುತ್ತಾನೆ ಎಂದು ಮಾತ್ರ ಆಕೆ ಎಂದೂ ಎಣಿಸಿರಲಿಲ್ಲ. 'ಕಲಬುರಗಿಯಲ್ಲಿ ಕಡಲನ್ನು ಕಂಡಂಗಾತು' ಎಂದು ಪ್ರೀತಂನ ತಲೆ ನೇವರಿಸಿದಳು. ನಿತ್ಯವೂ ಸುಮಿ ಆಡುತ್ತಿದ್ದ ಮಾತುಗಳು, ಆಕೆ ಕಳಿಸುತ್ತಿದ್ದ ಮೆಸೇಜುಗಳು ಪ್ರೀತಂಮಯವೇ ಆಗಿರುತ್ತಿದ್ದರಿಂದ ಆಕೆಗೆ ಪ್ರೀತಂ ಎದುರಾದಾಗ ಅಪರಿಚಿತ ಅನಿಸಲೇ ಇಲ್ಲ. ಕಡಲ ತೀರದ ಹುಡುಗನನ್ನು ಕಣ್ತುಂಬಿಕೊಂಡಷ್ಟೂ ಅವಳ ಹೃದಯವು ತುಂಬಿದ ಭಾವದಲ್ಲಿ ತುಳುಕಾಡುತ್ತಿತ್ತು. ಈ ಹುಡುಗನನ್ನು ಕಂಡು ತಾನು ಇಷ್ಟು ಭಾವಕಳಾಗುವುದು ಸಭೆಯಲ್ಲಿ ಕೂತವರ ಕುತೂಹಲಕ್ಕೆ ಕಾರಣವಾಗುವುದು ಎಂಬ ಅರಿವಾಗಿ ಸ್ವಲ್ಪ ಜಾಗರೂಕಳಾದಳು.

ಫಂಕ್ಷನ್ ಶುರುವಾಗಲು ಇನ್ನೂ ಅರ್ಧ ಗಂಟೆ ಸಮಯ ಇತ್ತಾದ್ದರಿಂದ, ಅವನನ್ನು ಸಭಾಭವನದಿಂದ ಹೊರಗೆ ಕರೆದೊಯ್ದು, 'ಬಾ ಪುಟ್ಟ, ಏನಾರ ತಿಂದ್ ಬರೋಣು' ಎಂದು ಹತ್ತಿರದ ಹೋಟೆಲ್ಲಿಗೆ ಕರೆದೊಯ್ದಳು. ಅವನಿಗೊಂದು ಬೆಣ್ಣೆ ದೋಸೆ ಆರ್ಡರ್ ಮಾಡಿದಳು. 'ಹೌದು, ನಾ ಇಲ್ಲಿ ಸಿಗ್ತೀನಿ ಅಂತ ನಿಂಗೆ ಹೆಂಗೆ ಗೊತ್ತಾತು?' ಅಂದಳು. ಪ್ರೀತಂ ಆ ದಿನದ ಪೇಪರ್ ತೆಗೆದು ಒಳಪುಟದಲ್ಲಿ ಅಚ್ಚಾದ ಸುದ್ದಿ ತೋರಿಸಿದ. 'ಖ್ಯಾತ ಸಾಹಿತಿ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿಯವರ ಉಪನ್ಯಾಸ' ಎಂಬ ಹೆಡ್‌ಲೈನಿನ ಅಡಿಯಲ್ಲಿ ಸುದ್ದಿಯ ವಿವರಗಳಿದ್ದವು.'ಅದೇನೋ ಸರಿ, ನಾನು ಈ ಫಂಕ್ಷನ್ನಿಗೆ ಬರೋದು ನಿಂಗೆ ಹೆಂಗೆ ತಿಳೀತು?' ಎಂದಳು.

'ನಾಗತಿಹಳ್ಳಿಯವರ ದೊಡ್ಡ ಫ್ಯಾನು ಅಂತ ಸುಮಿ ಹೇಳಿದ್ದಳು. ಅವರ 'ಮಲೆನಾಡಿನ ಹುಡುಗಿ ಬಯಲು ಸೀಮೆಯ ಹುಡುಗ' ಕತೆಯನ್ನು ನೀವು ನೂರು ಬಾರಿ ಓದಿದ್ದೀರಂತೆ' ಎಂದು ತುಸು ತುಂಟತನದಲ್ಲಿ ಹೇಳಿದ.

(ಸಶೇಷ)